

# ದಾಸ್ತಿಕೊಪ್ಪದ ಹಸಿರು ಗ್ರಂಥಾಲಯ

ಬೈಲಹೊಂಗಲ ತಾಲ್ಲೂಕಿನ ದಾಸ್ತಿಕೊಪ್ಪದಲ್ಲಿ 'ಹಸಿರು ಡಿಜಿಟಲ್' ಗ್ರಂಥಾಲಯ ನಿರ್ಮಿಸಿದ್ದಾರೆ. ಪ್ರತಿ ದಿನ ಬೆಳಿಗ್ಗೆ 8ರಿಂದ ರಾತ್ರಿ 9ರವರೆಗೂ ತೆರೆದಿರುವುದು ಈ ಗ್ರಂಥಾಲಯದ ವಿಶೇಷ. 100 ಜನ ಏಕಕಾಲಕ್ಕೆ ಕುಳಿತು ಓದಲು ಸ್ಥಳಾವಕಾಶವಿದೆ. ಮಹಿಳೆಯರಿಗೆ ಪ್ರತ್ಯೇಕ ಡಿಜಿಟಲ್ ಗ್ರಂಥಾಲಯ ನೀಡಿದ್ದಾರೆ.



ಬೀಡಿ ಗ್ರಾಮದ ಗ್ರಂಥಾಲಯ



### ಹಳ್ಳಿಯಲ್ಲೂ ಡಿಜಿಟಲ್ ಜ್ಞಾನಭಂಡಾರ

ಬೀಡಿ ಗ್ರಾಮದ ಹಲವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಲ್ಲಿಂದಲೇ ಓದಿ ವಿವಿಧ ವೃತ್ತಿಗಳಿಗೆ ಸೇರಿದ್ದಾರೆ. ನಾನು ಪದವಿ ಓದಿನ ಜತೆಗೆ ಡಿಜಿಟಲ್ ಗ್ರಂಥಾಲಯದಲ್ಲಿರುವ ಅಪಾರ ಸಂಖ್ಯೆಯ ನೋಟ್‌ಗಳನ್ನು ಬಳಸುತ್ತಿದ್ದೇನೆ. ಕನ್ನಡ, ಇಂಗ್ಲಿಷ್, ಮರಾಠಿಯ ನಿಯತಕಾಲಿಕೆಗಳೂ ಅನುಕೂಲಕರ.

—ಸೋನಾಲಿ ಜಾಧವ, ಪದವಿ ವಿದ್ಯಾರ್ಥಿನಿ



### ಗುಂಪು ಚರ್ಚೆಗೆ ವೇದಿಕೆ

ಗ್ರಂಥಾಲಯದ ಒಳಗೆ ಶಾಂತವಾಗಿ ಇರಬೇಕು. ಆದರೆ, ಬೀಡಿಯಲ್ಲಿ ಬಯಲು ಗ್ರಂಥಾಲಯದಿಂದ ಗುಂಪು ಚರ್ಚೆಗೂ ವೇದಿಕೆಯಾಗಿದೆ. ಊರಿನ ಭವಿಷ್ಯ ನಿರ್ಮಾಣವಾಗುವುದು ಇಂಥ ಮಾದರಿ ಗ್ರಂಥಾಲಯಗಳಲ್ಲೇ ಎಂಬುದು ನನ್ನ ನಂಬಿಕೆ.

—ಐಶ್ವರ್ಯ ಪಟ್ಟಣಶೆಟ್ಟಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ



### ಪುಸ್ತಕ ಇಡುವುದಷ್ಟೇ ಲೈಬ್ರರಿ ಅಲ್ಲ

ಪುಸ್ತಕಗಳನ್ನು ಹೊಂದಿಸಿ ಇಡುವುದಷ್ಟೇ ಗ್ರಂಥಾಲಯ ಅಲ್ಲ. ಚಟುವಟಿಕೆಯಿಂದ ಕೂಡಿರುವುದು ಗ್ರಂಥಾಲಯ. ಓದಿನ ಜತೆಗೆ ಕಲಾತ್ಮಕ ಚಟುವಟಿಕೆ, ಬೇಸಿಗೆ ಶಿಬಿರ, ಕೌಶಲ, ಕ್ರೀಡೆ ಹೀಗೆ ವಿವಿಧ ಚಟುವಟಿಕೆಗಳನ್ನೂ ಬೀಡಿ ಗ್ರಂಥಾಲಯದಲ್ಲಿ ನಡೆಸುತ್ತಿದ್ದೇವೆ.

—ಸಂತೋಷ ಕಾಶೀಲಕರ, ಅಧ್ಯಕ್ಷ, ಬೀಡಿ ಗ್ರಾಮ ಪಂಚಾಯಿತಿ



### ಬೇಕಿದೆ ಮತ್ತೊಂದು ಮಹಡಿ

ಗ್ರಂಥಾಲಯದ ಆಕರ್ಷಣೆ ಹೆಚ್ಚಿದ್ದರಿಂದ ಮಕ್ಕಳಿಗೆ, ಹಿರಿಯರಿಗೆ ಜಾಗ ಸಾಲದಾಗಿದೆ. ಕಟ್ಟಡದ ಮೇಲೆ ಮತ್ತೊಂದು ಅಂತಸ್ತು ಕಟ್ಟಿಸುವ ಪ್ರಸ್ತಾವ ಸಲ್ಲಿಸಿದ್ದೇವೆ. ಮಹಿಳೆಯರಿಗಾಗಿ ಅಲ್ಲಿ ವಿಶೇಷ ವ್ಯವಸ್ಥೆ ಕಲ್ಪಿಸಿ, ಅವರನ್ನೂ ಗ್ರಂಥಾಲಯದತ್ತ ಸೆಳೆಯುವುದು ನಮ್ಮ ಉದ್ದೇಶ.

—ಎಚ್.ಎಂ. ಪ್ರಸನ್ನಕುಮಾರ್, ಪಿಡಿಒ, ಬೀಡಿ



### ಪುಸ್ತಕ ಜೋಳಿಗೆ ಬೆಳೆಸಬೇಕಿದೆ

'ಓದುವ ಬೆಳಕು' ಯೋಜನೆಯಿಂದ ಗ್ರಂಥಾಲಯ ಇಲಾಖೆ ರಾಜ್ಯದ ಹಲವು ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಿದೆ. ಅದರೊಂದಿಗೆ ಬೀಡಿಯಲ್ಲಿ 'ಪುಸ್ತಕ ಜೋಳಿಗೆ' ಮಾಡಿಕೊಂಡು ಊರಿನ ಓದುಗರಿಂದಲೂ ಪುಸ್ತಕ ದೇಣಿಗೆ ಸಂಗ್ರಹಿಸಿದ್ದೇವೆ.

—ಜಯಶ್ರೀ ಇಳಿಗೇರ, ಗ್ರಂಥಾಲಯ ಮೇಲ್ವಿಚಾರಕಿ